ಪೂರ್ಣಗೊಂಡಿರುವ 165 ಯೋಜನೆಗಳು ಸೇರಿದಂತೆ ಈವರೆಗೆ ರೂ 14,485 37 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ -

728 (986) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನೆಲಮಂಗಲ ಮತ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಕೆರೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು ,

ಆ) ಪ್ರಸ್ತುತ ಖರ್ಚಾಗಿ ಉಳಿದ ಹಣವೆಷ್ಟು ,

ಇ) ಈ ಮತ ಕ್ಷೇತ್ರದಲ್ಲಿ ಕೆರೆ ಕಾಮಗಾರಿಗಳು ಕಳಪೆ ಮಟ್ಟದ್ದಾಗಿದೆಯೆಂದು ಸರ್ಕಾರಕ್ಕೆ ಪತ್ರ ಮುಖೇನ ಮನವಿ ಮಾಡಿರುವುದು ನಿಜವಲ್ಲವೆ ,

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ನೆಲಮಂಗಲ ಮತ ಕ್ಷೇತ್ರದ 12 ಕೆರೆಗಳ ಅಭಿವೃದ್ಧಿಗಾಗಿ ರೂ 234 41 ಲಕ್ಷಗಳ ಅಂದಾಜು ಮೊತ್ತ ನಿಗದಿಪಡಿಸಲಾಗಿದೆ

ಆ) ಡಿಸೆಂಬರ್ 2006ರ ಅಂತ್ಯದವರೆಗೆ ರೂ 80 21 ಲಕ್ಷಗಳು ವೆಚ್ಚವಾಗಿದೆ

ಇ) ನಿಜ

ಈ) ಈ ಬಗ್ಗೆ ಮುಖ್ಯ ಇಂಜಿನಿಯರ್‌ರವರಿಗೆ ತನಿಖೆ ನಡೆಸಿ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿದ್ದು, ಮುಖ್ಯ ಇಂಜಿನಿಯರ್‌ರವರು ಸಲ್ಲಿಸುವ ವರದಿಯ ಆಧಾರದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು

729 (987) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ನೀರಾವರಿ ಮೂಲಗಳು ಎಷ್ಟು , ಯಾವುವು ,

ಆ) ಈ ಮೂಲಗಳನ್ನು ಮನಶ್ಚೇತನಗೊಳಿಸಲು ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು ,

ಇ) ಇದಕ್ಕಾಗಿ ಖರ್ಚಾಗಿರುವ ಮತ್ತು ಉಳಿಕೆಯಾಗಿರುವ ಹಣ ಎಷ್ಟು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 3391 ಕೆರೆಗಳು, 402 ಏತ ನೀರಾವರಿ ಯೋಜನೆಗಳು, 698 ಅಣೆಕಟ್ಟು/ಪಿಕಪ್ ಬಾಂದಾರಗಳು ಹಾಗೂ 6 ಮಧ್ಯಮ ನೀರಾವರಿ ಯೋಜನೆಗಳು

P2
24

ಆ) 2006–07ನೇ ಸಾಲಿನಲ್ಲಿ 41985 44 ಲಕ್ಷ ರೂ ಗಳು ಒದಗಿಸಲಾಗಿದೆ

ಇ) ಖರ್ಚಾಗಿರುವ ಮೊತ್ತ (ಡಿಸೆಂಬರ್ 2006ರ ಅಂತ್ಯಕ್ಕೆ) 5827 92 ಲಕ್ಷ ರೂ ಗಳು ಉಳಿದಿರುವ ಮೊತ್ತ 36157 52 ಲಕ್ಷ ರೂ ಗಳು ಇದರಲ್ಲಿ 22639 00 ಲಕ್ಷ ರೂ ಗಳನ್ನು ಅಧ್ಯರ್ಪಣೆ ಮಾಡಲು ಪ್ರಸ್ತಾಪಿಸಿದೆ

730 (988) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಕೃಷಿ ಆಧಾರಿತ ರೈತರಿಗಾಗಲಿ, ಅವಲಂಬಿತ ಕಾರ್ಮಿಕರಿಗಾಗಲೀ ಹಾಗೂ ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದಕರಿಗೆ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು ,

ಆ) ಯಾವ ಯಾವ ಭಾಗದಲ್ಲಿ ಹಣ ಬಳಕೆಯಾಗಿದೆ ಮತ್ತು ಆಯವ್ಯಯದಲ್ಲಿ ತಿಳಿಸಿರುವಂತೆ "ರೇಷ್ಮೆ ವರದಾನ ಯೋಜನೆ"ಯನ್ನು ಸರ್ಕಾರ ಸ್ಥಾಪಿಸಲಾಗಿದೆಯೇ,

ಇ) ಇದಕ್ಕಾಗಿ ಎಷ್ಟು ಹಣ ಬಿಡುಗಡೆಯಾಗಿದೆ ?

ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು)

ಅ) ರಾಜ್ಯದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಪಡಿಸಲು ರೇಷ್ಮೆ ಬೆಳೆಗಾರರಿಗೆ ಮತ್ತು ರೀಲರುಗಳಿಗೆ ಸಹಾಯವಾಗುವ ಈ ಕೆಳಕಂಡ ಕಾರ್ಯಕ್ರಮಗಳಿಗೆ 2006–07ನೇ ಸಾಲಿಗೆ ಒಟ್ಟು ರೂ 3695 51 ಲಕ್ಷಗಳ ವಂಟನೆ ಒದಗಿಸಲಾಗಿದೆ ಜನವರಿ 2007ರ ಅಂತ್ಯದವರೆಗೆ ರೂ 2684 31 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

(ರೂ ಲಕ್ಷಗಳಲ್ಲಿ)

ಕ್ರ ಸಂ	ಕಾರ್ಯಕ್ರಮಗಳು	ವಂಟನೆ	ಬಿಡುಗಡೆ ಮಾಡಲಾದ ಹಣ
1	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ರಾಜ್ಯ ವಲಯ	2075 00	1775 00
2	ರೇಷ್ಮೆ ವರದಾನ ಯೋಜನೆ – ರಾಜ್ಯ ವಲಯ	500 00	100 00
3	ಹುಳು ಸಾಕಾಣಿಕೆ ಅಭಿವೃದ್ಧಿ – ರಾಜ್ಯ ವಲಯ	352 20	287 62
4	ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು	655 73	476 47
5	ವಿಶೇಷ ಘಟಕ ಯೋಜನೆ – ಜಿಲ್ಲಾ ವಲಯ	86 98	40 00
6	ಗಿರಿಜನ ಉಪಯೋಜನೆ – ಜಿಲ್ಲಾ ವಲಯ	25 60	5 22
	ಒಟ್ಟು	**3695 51**	**2684 31**